3

# ಮಾರ್ಕನ ಪುಸ್ತಕ

## ಸೇವಕನಾದ, ಕ್ರಿಸ್ತನು

ಮಾರ್ಕನ ಸುವಾರ್ತೆಯು ಹೆಚ್ಚು ಪ್ರಸಿದ್ಧಿ ಪಡೆಯದಿದ್ದರೂ, ಯೇಸುವಿನ ಜೀವನ ಚರಿತ್ರೆಯನ್ನು ಶಕ್ತಿಯುತವಾಗಿ ಇದರಲ್ಲಿ ಬಿಂಬಿಸಲಾಗಿದೆ.

### ಮಾರ್ಕನ ಸುವಾರ್ತೆಯ ಪೀಠಿಕೆ

**ಈ ಪುಸ್ತಕದ ಗ್ರಂಥಕರ್ತ**

ಮಾರ್ಕನ ಪುಸ್ತಕದಲ್ಲಿ ಗ್ರಂಥಕರ್ತೃವಿನ ಹೆಸರಿಲ್ಲದೆ ಹೋದರೂ, ಹಳೆಯ ಸಂಪ್ರದಾಯದ (ಪ್ರೇರಿತವಲ್ಲದ) ಪ್ರಕಾರ ಮಾರ್ಕನೆನಿಸಿಕೊಳ್ಳುವ ಯೋಹಾನನು ಎಂಬ ಹೆಸರನ್ನು ಹೆಸರಿಸಿದೆ. ಇತಿಹಾಸಕಾರನಾದ ಯೂಸೇಬಿಯಸನ (c. ಕ್ರಿ.ಶ. 260-340) ಪ್ರಕಾರ (c. ಕ್ರಿ.ಶ. 60-150), ಮಾರ್ಕನು ಈ ಪುಸ್ತಕವನ್ನು ಬರೆದಿದ್ದಾನೆ. ಅಲೆಕ್ಸಾಂಡ್ರಿಯದ ಕ್ಲೆಮೆಂಟನ ಪ್ರಕಾರ, ಮಾರ್ಕನು ಇದನ್ನು ಬರೆದಿದ್ದಾನೆ[1] (c. ಕ್ರಿ.ಶ. 185-254). ಇರೇನಿಯಸನು ಸಹ (c. ಕ್ರಿ.ಶ. 140-195) ಇದನ್ನು ಉತ್ತೇಜಿಸಿದ್ದಾನೆ.[2]

ಮಾರ್ಕನಾದ ಯೋಹಾನನು ಅಂದರೆ ಇಬ್ರಿಯ ಭಾಷೆಯಲ್ಲಿ ಯೋಹಾನನು ("ಯೆಹೋವನು ಕೃಪಾಪೂರ್ಣನು"), ಅವನ ರೋಮಾಯದ ಹೆಸರು "ಮಾರ್ಕಸ್" ("ಯುದ್ಧದಂತೆ"). ಅವನು ಯೆರುಸಲೇಮಿನ ತನ್ನ ತಾಯಿಯಾದ ಮರಿಯಳ ಮನೆಯಲ್ಲಿ ವಾಸಿಸಿರಬಹುದು (ಅಪೊಸ್ತಲರ ಕೃತ್ಯಗಳು 12:12). ಯೆರೂಸಲೇಮಿನಲ್ಲಿ, ಯೇಸುವಿನ ಕುರಿತಾಗಿ ಉಂಟಾದ ಅನೇಕ ಘಟನೆಗಳಿಗೆ ಇವನು ಸಾಕ್ಷಿಯಾಗಿದ್ದನು. ಅನೇಕ ಬರವಣಿಗೆಕಾರರ ಪ್ರಕಾರ ಮಾರ್ಕ 14:51, 52ರಲ್ಲಿ ಮಾರ್ಕನು ತನ್ನ ಕುರಿತಾಗಿ ಬರೆದಿರುವನು ಎಂಬ ನಂಬಿಕೆಯಿದೆ. ಪೇತ್ರನ ಪ್ರಸಂಗದ ಮೂಲಕ ಮರ್ಕನು ಪರಿವರ್ತನೆಗೊಂಡಿದ್ದು (1 ಪೇತ್ರ 5:13). ನಂತರದಲ್ಲಿ, ಅವನ ತಾಯಿಯ ಮನೆಯಲ್ಲಿ ಕ್ರೈಸ್ತರು ಒಟ್ಟಾಗಿ ಸೇರಿಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 12:12).[3]

ಕೊಲಸ್ಸೆ 4:10 ಮಾರ್ಕನು ಬಾರ್ನಬನ ಸಂಬಂಧಿಯಾಗಿದ್ದನು. ಅವನು ಯೌವನ ಕಾಲದಲ್ಲಿ ಪೌಲ ಬಾರ್ನಬರ ಎರಡನೆಯ ಸೇವಾ ಪ್ರಯಾಣದಲ್ಲಿ ಸೇವೆ ಆರಂಭಿಸಿದನು, ಆದರೆ ಪ್ರಯಾಣದ ಆರಂಭದಲ್ಲೇ ಅವನು ಅವರನ್ನು ಬಿಟ್ಟು ಹೋದನು (ಅಪೊಸ್ತಲರ ಕೃತ್ಯಗಳು 12:25; 13:5, 13), ಇದರಿಂದ ಪೌಲನು ಬಹು ಬೇಸರಗೊಂಡನು (ಅಪೊಸ್ತಲರ ಕೃತ್ಯಗಳು 15:37-39). ಬಾರ್ನಬನು ಮಾರ್ಕನಲ್ಲಿ ಭರವಸವಿಟ್ಟು, ಅವನನ್ನು ಸೇವೆಗಾಗಿ ತನ್ನ ಸಂಗಡ ಸೈಪ್ರಸ್‌ಗೆ ಕರೆದುಕೊಂಡುಹೋದನು (ಅಪೊಸ್ತಲರ ಕೃತ್ಯಗಳು 15:39). ನಂತರ ಮಾರ್ಕನು ಸುವಾರ್ತೆಗಾಗಿ ಪೇತ್ರನ ಸಂಗಡ ಶ್ರಮಿಸಿದನು (1 ಪೇ 5:13). ಹೀಗೆ ಅವನು ಪೌಲನ ಸಂಗಡ ಸೇವೆಯಲ್ಲಿರುವವಾಗ, ಅಪೊಸ್ತಲನು ಅವನನ್ನು ಪ್ರಯೋಜಕನು ಎಂದು ತಿಳಿಸಿದನು (ಕೊಲಸ್ಸೆ 4:10, 11; ಫಿಲೋಮೋನ 24; 2 ತಿಮೊಥೆ 4:11).

ಅವನು ಯೇಸುವಿಗಿಂತಲೂ, ಅಪೊಸ್ತಲರಿಗಿಂತಲೂ ಕಿರಿಯವನಾಗಿದ್ದನು,[4] ಅವನು ಅರಿಗಿಂತ ಹತ್ತು ವರ್ಷಗಳು ಕಿರಿಯವನವನಿರಬಹುದು. ತಿಮೊಥೆ ಹಾಗೂ ತೀತನ ಸಂಗಡ, ಅಪೊಸ್ತಲರ ಯುಗದಲ್ಲಿ ಇವನು ಕಿರಿಯವ ಪ್ರಸಂಗಿಯಾಗಿದ್ದನು. ಸಂಪ್ರದಾಯದ ಹೇಳಿಕೆಯು

ಪ್ರಕಾರ ಅವನು ಈಜಿಪ್ಟಿನ, ಅಲೆಕ್ಸಾಂಡ್ರಿಯದಲ್ಲಿ ಒಂದು ಸಭೆಯನ್ನು ಕಟ್ಟಿದನು.

ಪೌಲನಂತ, ಇನ್ನು ಅನೇಕರ ಪ್ರೇರಿತವಾದ ಜೀವಿತಗಳಿಂದ ಕಲಿಯುವಂಥ ಅವಕಾಶವನ್ನು ಅವನು ಹೊಂದಿದ್ದನು, ಅವನು ಪೇತ್ರನ ಅನ್ಯೋನ್ಯತೆಯನ್ನು ಹೊಂದಿದ್ದನು ಎಂಬ ಪ್ರತೀತಿ ಇದೆ. ಮಾರ್ಕನ ಸಮಾಚಾರವು ಪೇತ್ರನಿಂದ ದೊರಕಿತು ಎಂಬ ಹೇಳಿಕೆಯು ಸಹ ಇದೆ. ಪಾಪಿಯಸ್ ಎಂಬುವನು, ಮಾರ್ಕನು ಪೇತ್ರನ ಅನುವಾದಕನಾಗಿದ್ದನು,

> … ಇದನ್ನು ಬರೆದವನು ಯಾರೇ ಇದ್ದರು, ಅವನು ತಪ್ಪಿಲ್ಲದೆ ಬರೆದಿರುವನು ಒಂದು ವೇಳೆ ಕರ್ತನು ತಿಳಿಸಿರುವ ಕ್ರಮದ ಪ್ರಕಾರ ಇರದೆ ಇರಬಹುದು. ಅವನು ಕೇಳಿರಲಿಲ್ಲ. ಆತನನ್ನು ಹಿಂಬಾಲಿಸಿಯೂ ಇರಲಿಲ್ಲ, ಆದರೆ ಅವನು ಪೇತ್ರನ ಸಂಪರ್ಕದಲ್ಲಿದ್ದನು, ಪೇತ್ರನು ಅನುಕೂಲಕವಾದ ಮಾಹಿತಿಯನ್ನು ನೀಡಿದ್ದನು, ಆದರೆ ಕರ್ತನ ಸಂದೇಶದ ಪೂರ್ಣ ಮಾಹಿತಿ ನೀಡಿರಲಿಲ್ಲ ಆದ್ದರಿಂದ ಮಾರ್ಕನು ಯಾವದೇ ತಪ್ಪೆಸಗಿರಲಿಲ್ಲ, ಅವನು ಕೇಳಿದ ಸತ್ಯಸಂಗಡವನ್ನು ನಿಕಟವಾಗಿ ದಾಖಲಿಸಿದ್ದನು.[5]

ಪೇತ್ರನು ತಿಳಿಸಿದ ವಿಚಾರಗಳನ್ನು ಮಾರ್ಕನು ದಾಖಲಿಸಬೇಕೆಂದು ಅವನ ಅನುಯಾಯಿಗಳು ತಿಳಿಸಿದರೆಂದು ಅಲೆಕ್ಸಾಂಡ್ರಿಯದ ಕ್ಲೆಮೆಂಟನು ಹೇಳಿದನು. ಪೇತ್ರನು ಅದಕ್ಕೆ ಸಮ್ಮತಿ ನೀಡಿದ್ದನು.[6] ಇರೇನಿಯದ ಪ್ರಕಾರ "ಪೇತ್ರ ಹಾಗೂ ಪೌಲನ ಮರಣದ ನಂತರ, ಪೇತ್ರನ ಪ್ರಸಂಗವನ್ನು ಮಾರ್ಕನು ತಿಳಿಸಿರುವನು."[7]

ಈ ಪುರಾತನ ಹೇಳಿಕೆಯನ್ನು ಅನೇಕ ಸಾಕ್ಷಿಗಳು ಸಮ್ಮತಿಸಿವೆ: ಅಪೊಸ್ತಲರ ಕೃತ್ಯಗಳು 10:36-42 ವಾಕ್ಯವು ಮಾರ್ಕನ ಪುಸ್ತಕಕ್ಕೆ ಮಾರ್ಗದರ್ಶನವಾಗಿವೆ. ಮಾರ್ಕ 16:7ರಲ್ಲಿ ಪೇತ್ರನ ಹೆಸರನ್ನು ಮಾರ್ಕನು ಮಾತ್ರ ನಮೂದಿಸಿರುವನು.

ಬಾಯಿಂದ ಹೇಳಿದ ಸಂಗತಿಯನ್ನು ಸಕ್ಷಿಕರಿಸಿರುವ ಪುರಾವೆಯನ್ನು ಈ ಪುಸ್ತಕದಲ್ಲಿ ಗಮನಿಸುತ್ತೇವೆ. (ಕೆಲವರು ಮಾರ್ಕನನ್ನು "ಒರಟಾದ ಗ್ರೀಕ್ ಪ್ರಸಂಗಿ" ಎಂದಿರುವರು.)

### ಈ ಪುಸ್ತಕದ ಉದ್ದೇಶ

ರೋಮಾಯರಿಗಾಗಿ ಇದನ್ನು ಬರೆಯಲಾಗಿದೆ ಎಂಬ ಪ್ರತೀತಿ ಇದೆ.[8] ಅವರಿಗೆ ಆಸಕ್ತಿ ಇಲ್ಲದ, ಸಂಗತಿಗಳನ್ನು ವಂಶಾವಳಿಗಳನ್ನು ನಮೂದಿಸಿರುವದಿಲ್ಲ. ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಕೊಂಚವಾಗಿ ತಿಳಿಸಿರುವನು. ಕ್ರಿಸ್ತನ ಯೆಹೂದ್ಯ ಹಿನ್ನಲೆಯನ್ನು ಹೆಚ್ಚಾಗಿ ಬರೆದಿರುವದಿಲ್ಲ. ಅವನು ಯೆಹೂದ್ಯ ಸಂಪ್ರದಾಯ, ಸಂಸ್ಕೃತಿಯನ್ನು ತಿಳಿಸಿದಾಗ, ಅವುಗಳನ್ನು ವಿವರಿಸಿರುವನು. ಸುವಾರ್ತೆ ಬರಹಗಾರರು ಎಲ್ಲೆಲ್ಲಿ ಗ್ರೀಕ್ ಬಳಸಿರುವರೇ, ಅಲ್ಲಿ ಅವನು ಲ್ಯಾಟೀನ್ ಭಾಷೆಯನ್ನು ಬಳಸಿರುವನು (ಉದಾಹರಣೆ: "ಬಾಸ್ಕೆಟ್" ಎಂಬುದಕ್ಕೆ *modius* [ಮಾರ್ಕ4:21], *census* ಎಂಬುದಕ್ಕೆ "poll-tax" [12:14], *speculator* ಬದಲು "executioner" [6:27], ಮತ್ತು *centurio* ಬದಲು "centurion" [15:39, 44, 45]). ರೋಮಾಯರಲ್ಲಿ ಪ್ರಸಿದ್ಧಿಗೊಂಡಿದ್ದ ರೂಫಸ್ ಎಂಬ ಹೆಸರನ್ನು ಮಾರ್ಕನು ಮಾತ್ರ ಬಳಸಿರುವನು (15:21). ಮೆರಿಲ್ ಟೆನ್ನಿಯವರ ಪ್ರಕಾರ ರೋಮಾಯರ ಮನಸ್ಸನ್ನು (ರೋಮಾಪುರ 16:13) ಹೊಂದಿದ್ದ, ಸುವಾರ್ತೆಯನ್ನು ಕೇಳಿದವರಿಗಾಗಿ ಮಾರ್ಕನ ಸುವಾರ್ತೆಯು ಬರೆಯಲ್ಪಟ್ಟಿದೆ.[9]

ಅಂತಹ ಜನರಿಗೆ, ಮಾರ್ಕನು *ಕ್ರಿಯಾಶೀಲನಾದ* ಯೇಸುವಿನ ಸಮಾಚಾರ ತಿಳಿಸಿದನು. ಸುವಾರ್ತೆಗಳಲ್ಲಿ, ಇದು ಅತಿ ಚಿಕ್ಕ ಹಾಗೂ ಸಂಕ್ಷಿಪ್ತ ಸಂದೇಶವನ್ನು ಹೊಂದಿದೆ. ಪುಟ್ಟ ಬೋಧನೆಗಳನ್ನು ಒಳಗೊಂಡಿದೆ: ನಾಲ್ಕು ವಿಶಾಲವಾದ ಸಾಮ್ಯಗಳನ್ನು ಹೊಂದಿದ್ದು, ವಿಶಾಲ ಸಂದೇಶಗಳನ್ನು ಹೊಂದಿರುವದಿಲ್ಲ. ಮಾನವರಿಗೆ ಸಂಬಂಧಿಸಿದ ಮಹತ್ಕಾರ್ಯಗಳನ್ನು ಇಲ್ಲಿ ತಿಳಿಸಲಾಗಿದೆ. ಇತರೆ ಸುವಾರ್ತೆಗಳಲ್ಲಿ ಇರದೆ, ವಿಶಾಲ ಅನುವಾದವು ಇದರಲ್ಲಿ ಒಳಗೊಂಡಿದೆ.

ಹದಿನಾರು ಅಧ್ಯಾಯಗಳಲ್ಲಿನ, ಹದಿಮೂರು ಅಧ್ಯಾಯಗಳು "ಮತ್ತು" ಎಂಬ ಪದದಿಂದ ಆರಂಭವಾಗಿದೆ. ಗ್ರೀಕ್ ಪದದ ಪ್ರಕಾರ "ತಕ್ಷಣವೇ" ಅಥವಾ ನೇರವಾಗಿ ನಾಲ್ವತ್ತು-ಎರಡು ಸಾರಿ ಈ ಪದ ಪ್ರಯೋಗವಾಗಿದೆ. ಯೇಸು ತನ್ನ ಸೇವೆಯನ್ನು ವೇಗವಾಗಿ ಮುಗಿಸಿದ್ದಾನೆ.

ಮಾರ್ಕ 10:45 ಪ್ರಮುಖ ಅಂಶವಾಗಿದೆ: ಮನುಷ್ಯಕುಮಾರನು ಸೇವೆ ಮಾಡುವದಕ್ಕೆ ಬಂದನೇ ಹೊರತು ಸೇವೆ ಮಾಡಿಸಿಕೊಳ್ಳುವದಕಲ್ಲ. ಅನೇಕರಿಗಾಗಿ, ತನ್ನ ಪ್ರಾಣವನ್ನು ಈದಾಗಿ ನೀಡಲು ಬಂದನು. ಇದಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಮತ್ತಾಯನಲ್ಲಿ ಯೇಸುವನ್ನು ಅರಸನೆಂದು ತಿಳಿಸಿದ್ದರೆ, ಮಾರ್ಕನು ಆತನನ್ನು ಸೇವಕನೆಂದು ತಿಳಿಸಿರುವನು. ಮಾರ್ಕನು ದೈವೀಕ ಹೆಸರುಗಳನ್ನು ತಿಳಿಸದೆ,[10] ಯೇಸು *ಸೇವೆ ಮಾಡಲು* ಬಂದಾತನು ಎಂದು ತಿಳಿಸಿರುವನು.[11]

ಹೌದು ಸುವಾರ್ತೆಯ ಉದ್ದೇಶವನ್ನೇ ಈ ಪುಸ್ತಕವು ಹೊಂದಿರುತ್ತದೆ: ಯೇಸುವನ್ನು ದೇವರ ಮಗನು ಮತ್ತು ರಕ್ಷಕನು ಎಂದು ಬಂಧಿಸಿದೆ. ಯೇಸು ಕ್ರಿಸ್ತನ ಸುವಾರ್ತೆ ಎಂಬ ವಾಕ್ಯದಿಂದ ಈ ಸುವಾರ್ತೆಯು ಆರಂಭಗೊಂಡಿದೆ (ಮಾರ್ಕ 1:1). "ಸುವಾರ್ತೆ" ಎಂಬ ಪದವನ್ನು ನಾಲ್ಕು ಸುವಾರ್ತೆಗಳಲ್ಲಿ ಹನ್ನೆರಡು ಸಾರಿ ಬಳಸಿದ್ದರೆ, ಮಾರ್ಕನಲ್ಲಿ ಎಂಟು ಬಾರಿ ಬಳಸಲಾಗಿದೆ. ಮಾರ್ಕನ ಸುವಾರ್ತೆ ಇತರೆ ಸುವಾರ್ತೆಗಳಿಗಿಂತ ವಿಭಿನ್ನವಾಗಿದೆ, ಕ್ರಿಸ್ತನ ಚಿತ್ರಣವನ್ನು ಅವನು ನೀಡುವದರಿಂದ, ಆ ಚಿತ್ರಗಳೇ ನಮ್ಮೊಂದಿಗೆ ಮಾತನಾಡಲಿ.

**ಪುಸ್ತಕದ ಗುಣಲಕ್ಷಣಗಳು**

ಕೇಳಿದ (ಪೇತ್ರನಿಂದ) ಸಂಗತಿಗಳನ್ನು ನಮೂದಿಸಿರುವ ಪುಸ್ತಕವಾಗಿದೆ, ಯೇಸುವನ್ನು ಸೇವಕನೆಂದ ತಿಳಿಸುವ ಉದ್ದೇಶದಿಂದ ಬರೆಯಲಾಗಿದೆ. ಇದು ಕ್ರಿಯಾಶೀಲವಾದ ಪುಸ್ತಕವಾಗಿದೆ, ಹಾಗೂ ಉದ್ವೇಗದ ಪುಸ್ತಕವಾಗಿದೆ. ಯೇಸುವಿನ ಕೇಳುಗರು ಆಶ್ಚರ್ಯಪಟ್ಟರು (1:27); ಅವರು ಸಂಕಷ್ಟದಲ್ಲಿದ್ದರು (2:7); ಅವರು ಭಯಗೊಂಡಿದ್ದರು (4:41); ಅವರೆಲ್ಲ ಗೊಂದಲಕ್ಕೊಳಗಾಗಿದ್ದರು (6:14); ವಿಸ್ಮಯಗೊಂಡಿದ್ದರು (7:37); ಅವರು ವೈರತ್ವವುಳ್ಳರಾಗಿದ್ದರು (14:1). ಇಂಥಹ ಇಪ್ಪತ್ತಮೂರು ಸಂಗತಿಗಳನ್ನು ತಿಳಿಸಲಾಗಿದೆ. ಯೇಸುವಿನ ಅನುಕಂಪ (1:41; 6:34; 8:2); ಸಿಟ್ಟು (3:5); ಗೊಂಡನು. ಆತನು ಬಡವನಾಗಿದ್ದನು (10:14); ಅನುತಾಪಪಟ್ಟನು (7:34; 8:12); ಆತನು ವೇದನೆಗೊಂಡನು (14:33, 34).

ಇದು ಚಿಂತನೆ ಮಾಡುವ ಪುಸ್ತಕವಾಗಿದೆ. ಯೇಸು ಜನರ ಆನಂದ, ಹಸಿವು, ಕಷ್ಟ, ಆರೋಗ್ಯ ಹಾಗೂ ಅವರಲ್ಲಿದ್ದ ಕಪಟತನದ ಕುರಿತು ಚಿಂತಕನಾಗಿದ್ದನು.

ಮಾರ್ಕನ ಪುಸ್ತಕ ಸೇವೆಯ ಸುವಾರ್ತೆಯಾಗಿದೆ. ಯೇಸು ಪರದೇಶಿಗಳನ್ನು ಸಂಧಿಸಿದನು, ಕಿವುಡರಿಗೆ ಬಿಡುಗಡೆ ಮಾಡಿದನು, ಹಸಿವು ಇಂಗಿಸಿದನು, ತೀವ್ರವಾದಿಗಳನ್ನು ಎಚ್ಚರಿಸಿದನು.

ಇದು ಶಿಲುಬೆಯನ್ನು ಪ್ರಚುರ ಪಡಿಸಿದೆ. ಶಿಲುಬೆಯ ಮರಣವು ಪ್ರಮುಖ ಪ್ರಸ್ತಾಪವಾಗಿದೆ. ಮಾರ್ಕನ ಪುಸ್ತಕದಲ್ಲಿ, ಯೇಸುವಿನ ಯೆರೂಸಲೇಮಿನ ಪ್ರಯಾಣದ ಕುರಿತು ಶೇಕಡ ನಲ್ವತ್ತು ಹೆಚ್ಚು ಪ್ರಸ್ತಾಪವಾಗಿದೆ. ಯೋಹಾನನು ಅಧಿಕ ಒತ್ತು ನೀಡಿರುವನು.

ಮಾರ್ಕನ ಸುವಾರ್ತೆಯಲ್ಲಿ ಜೀವ ಕಳೆಯನ್ನು ತಂಬಲಾಗಿದೆ. ಯೇಸುವಿನ ವೈಯಕ್ತಿಕತೆಯನ್ನು ಬಿಂಬಿಸಲಾಗಿದೆ. ಇದರಲ್ಲಿ ಆತನ ಜೀವ ಕ್ಷಣಗಳಿವೆ. ಆತನನ್ನು "ಬೀದಿಯ ಪ್ರಸಂಗಿ" ಎಂದು ತೋರಿಸಲಾಗಿದೆ.

**ಈ ಪುಸ್ತಕವನ್ನು ಬರೆದ ಕಾಲಮಾನ**

ಮೊದಲ ಶತಮಾನದ ಅರ್ಧದಲ್ಲಿ ಇದನ್ನು ಬರೆಯಲಾಗಿದೆ. ಅವನ ಓದುಗರಿಗೆ ಪ್ರಿಯರಾದ ಅಲೆಕ್ಸಾಂಧ್ರ ಹಾಗೂ ರೋಫನ ಹೆಸರನ್ನು ತಿಳಿಸಲಾಗಿದೆ (15:21). ಶಿಲುಬೆಯ ಸಂದರ್ಭದಲ್ಲಿ ಜನರಿಗೆ ಬರೆಯಲಾಗಿದೆ. ಪೇತ್ರನಿಗೆ ಸಂಬಂಧ ಪಟ್ಟ ಬರವಣಿಗೆಯಿದೆ. ಮಾರ್ಕನು ಇದನ್ನು ಬಹಿರಂಗಪಡಿಸುವ ಮೊದಲು, ಪೇತ್ರನು ಈ ಪುಸ್ತಕವನ್ನು ಪರಿಶೀಲಿಸಿದನು ಎಂಬ ಪ್ರತೀತಿ ಯಿದೆ. ಕ್ರಿ.ಶ. 65 ಮತ್ತು 68ರಲ್ಲಿ ಪೇತ್ರನು ಮರಣ ಹೊಂದಿರಬಹುದು.[12]

ಮಾರ್ಕನ ಸುವಾರ್ತೆಯಿಂದ, ಮತ್ತಾಯ ಮತ್ತು ಲೂಕ ಪ್ರತಿಗಳನ್ನು ಪಡೆದಿದ್ದರೂ, ಮತ್ತಾಯನನ್ನು ಕ್ರಮಾಂಕದ ಪ್ರಥಮ ಸ್ಥಾನದಲ್ಲಿ ಇರಿಸಲಾಗಿದೆ. ಎಂಬದು ಹಲವರ ನಂಬಿಕೆ. ಈ ವಿಚಾರವನ್ನು ಕುರಿತು ಟಿನ್ನಿಯವರು:

> ಈ ಸುವಾರ್ತೆಗಳು, ಅಪೊಸ್ತಲರ ಬೋಧನೆಗಳನ್ನು ಪಡೆದು, ಮೂರು ವಿಧವಾಗಿ ಬರೆದು ಪ್ರಚಾರ ಮಾಡಿರುವವದಾದರೆ, ಅದು ಕರ್ತನಾದಂಥ ಯೇಸುವಿನ ಸಂಗತಿ ಪವಿತ್ರಾತ್ಮ ಪ್ರೇರಿತವಾದ ಸಂಗತಿ, ಅವುಗಳನ್ನು ಕ್ರಮವಾಗಿ ಬರೆಯಲಾಗಿದೆ.[13]

ಕ್ರಿ.ಶ. 50-60, 58-65, ಮತ್ತು 60-70ರಲ್ಲಿ ಇದನ್ನು ಬರೆದಿರಬಹುದು. ಕ್ರಿ.ಶ. 70ರಲ್ಲಿ ಬರೆದಿರಬಹುದು ಎಂಬುದು ನಂಬಲರ್ಹವಾಗಿದೆ.

**ಈ ಪುಸ್ತಕದ ವಿಭಾಗಗಳು**

ಇದು ಸರಳವಾದ ವಿಭಾಗಗಳನ್ನು ಹೊಂದಿರುವದಿಲ್ಲ, ಯಾಕೆಂದರೆ ಮಾರ್ಕನು ದೈವ ಶಾಸ್ತ್ರ ಕ್ರಮವಾಗಿ ಬರೆದಿರುವದಿಲ್ಲ, ಪೂರ್ಣ ಮಾಹಿತಿಯನ್ನು ನೀಡುವ ಸಲುವಾಗಿ ಬರೆಯಲಾಗಿದೆ.

ವಿವಿಧ ವಿಭಾಗಗಳ ಕುರಿತಾಗಿ ಜಾನ್ ಫಿಲಿಪ್ಸ್‌ರವರು ಮಾರ್ಕ 10:45ರ ಭಾಗದಿಂದ ಕೆಲವು ಮಾಹಿತಿಗಳನ್ನು ನೀಡಿರುವರು: (1) ಸೇವಕನ ಜೀವವು ಸೇವೆಗಾಗಿ ಮೀಸಲು (ಅಧ್ಯಾಯ 1-10); (2) ಸೇವಕನು ತನ್ನನ್ನೇ ಯಜ್ಞಾರ್ಪಣೆ ಮಾಡಿರುವನು (ಅಧ್ಯಾಯ 11-16).[14] "ಸೇವಕ" ಎಂಬ ಪದವನ್ನು ಪ್ರಯೋಗಿಸಿ, ಹೆಸ್ರೆಟಾ ಮಿಯರ್ಸ್‌ರವರು ಏಳು ವಿಭಜನೆಗಳನ್ನು ನೀಡಿರುವರು: (1) ಸೇವಕನ ಆಗಮನ ಹಾಗೂ ಪರೀಕ್ಷೆ (ಅಧ್ಯಾಯ 1); (2) ಸೇವಕನು ಕಲಸ ಮಾಡಿದನು (ಅಧ್ಯಾಯ 2 ಮತ್ತು 3); ಹೀಗೆ ಮುಂದುವರೆಸಿದ್ದಾರೆ.[15] ಕೆಲವರು, ಯೇಸುವಿನ ಕೆಲಸದ ಆಧಾರದಲ್ಲಿ, ಎರಡು ವಿಭಜನೆ ಮಾಡಿರುವರು: ಗಲಿಲಾಯ ಹಾಗೂ ಯುದಾಯ ಯೇಸು ಕೆಲಸ ಮಾಡಿದ ಸ್ಥಳಗಳನ್ನು ಆಧರಿಸಿ ಟೆನ್ನಿಯವರು ಏಳು ವಿಭಜನೆ ಮಾಡಿರುವರು.[16]

ಮುಂದಿನ ಮುಖ್ಯಾಂಶಗಳನ್ನು ಈ ಪದ್ದತಿಯನ್ನೇ ಬಳಸೋಣ, ಈ ಪುಸ್ತಕವನ್ನು ಒಂದು ಸಂಪೂರ್ಣ ಪುಸ್ತಕವೆಂದು ಪರಿಗಣಿಸೋಣ.

## ಮಾರ್ಕನ ಸುವಾರ್ತೆಯ ವಿಭಜನೆಗಳು

I. ಸೇವೆ ಮಾಡಲು ಸಿದ್ಧಗೊಂಡ ಸೇವಕ (1:1-13).
   A. ತಲೇಬರಹ ಹಾಗೂ ಉದ್ದೇಶ (1:1).
   B. ಯೋಹಾನನು ಸಿದ್ದ ಪಡಿಸಿದ ದಾರಿ (1:2-8).
   C. ದೀಕ್ಷಾಸ್ನಾನ ಪಡೆದು ಯೇಸು ಸಿದ್ಧನಾದದ್ದು (1:9-11).
   D. ಶೋಧನೆಯನ್ನು ಹೊಂದಿ ಯೇಸು ಸಿದ್ಧನಾದದ್ದು (1:12, 13).
   E. ಇವುಗಳ ಮೂಲಕ ಯೇಸು ಸಿದ್ಧಿಪಡಿಸಿದನು ...
      1. ಯೋಹಾನನು ದೃಢಿಕರಿಸಿದನು.

2. ಪವಿತ್ರಾತ್ಮನಿಂದ ಅಭಿಷೇಕ.
3. ಸೈತಾನನಿಂದ ಪರಿಶೋಧನೆ.

II. ಸೇವಕನ, ಸೇವೆಯ ಸಮರ್ಪಣೆ (1:14-8:30).

A. ಸೇವೆಯ ಆರಂಭ (1:14-2:12).

1. ಯೋಹಾನನ ಮರಣದ ನಂತರ, ಯೇಸು ಗಲಿಲಾಯದಲ್ಲಿದದ್ದು (1:14, 15).
2. ಯೇಸು, ನಾಲ್ಕು ಜನ ಬೆಸ್ತರನ್ನು ಕರೆದದ್ದು (1:16-20).
3. ಕೆಪೆರ್ನೌಮಿನ ಮಹಾದಿನ (1:21-34) (ಸ್ವಸ್ಥತೆಯ ಪಟ್ಟಿ).
4. ಗಲಿಲಾಯದ ಸಾಮಾನ್ಯ ಪ್ರವಾಸ, ಕುಷ್ಟರೋಗಿ ವಾಸಿಯಾದದ್ದು (1:35-45).
5. ಕಪೆರ್ನೌಮಿನ ಮತ್ತೊಂದು ಮಹಾದಿನ, ಮೇಲ್ಛಾವಣಿಯಿಂದ ಇಳಿಯಲ್ಪಟ್ಟವನ ಸ್ವಸ್ಥತೆ (2:1-12). ಪಾಪ ಕ್ಷಮಿಸುವ ಶಕ್ತಿ.

B. ಟೀಕೆಯ ಆರಂಭ (2:13-3:35).

1. ಸಮುದ್ರದ ಬಳಿಯ ಪ್ರಸಂಗ (2:13).
2. ಲೇವಿಯನ ಕರೆ ಹಾಗೂ ಪಾಪಿಗಳ ಸಂಗಡ ಔತಣ (ಟೀಕೆ) (2:14-17).
3. ಉಪವಾಸ ಕುರಿತ ಟೀಕೆ (2:18-22).
4. ಸಬ್ಬತ್ ಕುರಿತ ಟೀಕೆ (2:23-3:5).
5. ಫರಿಸಾಯ ಹಾಗೂ ಹೆರೋದ್ಯರ ಒಳಸಂಚು (3:6).
6. ಯೇಸುವಿನ ವ್ಯತ್ಯಾಸವುಳ್ಳ ಸೇವೆ ಹನ್ನೆರಡು ಜನರನ್ನು ಆಯ್ಕೆ ಮಾಡಿ "ಸ್ನೇಹಿತರಿಂದ ಭರಮನಿರಶ" ಎಂಬ ಟೀಕೆ (3:7-21).
7. ಬೆಲ್ಜಬೂಲನ ಸಹಾಯದಿಂದ ಗುಣಪಡಿಸುವನು ಎಂಬ ಆರೋಪ; ಪವಿತ್ರಾತ್ಮನಿಗೆ ವಿರೋಧವಾದ ಪಾಪದ ಬೋಧನೆ (3:22-30).
8. ದೇವರ ಚಿತ್ತವನ್ನು ನೆರವೇರಿಸುವವರೇ ಆತನ ತಾಯಿ ಹಾಗೂ ಸಹೋದರರು (3:31-35).

C. ಸೇವೆಯ ಒಂದು ಸವಾಲು. (ದಕಪೋಲಿ, ಫೊಯಿನಿಕೆ, ಕೈಸರೆಯ ಫಿಲಿಪ್ಪಿ ವಿರೋಧ.)

1. ದೋಣಿಯಿಂದ, ಸಾಮ್ಯಗಳ ಬೋಧನೆ, ಬಿತ್ತುವವನ, ದೀಪದ ಬೆಳವಣಿಗೆಯ ಸಾಸಿವೆ ಕಾಳಿನ ಕುರಿತ ಸಾಮ್ಯ (4:1-34).
2. ಗಲಿಲಾಯ ಸಮುದ್ರವನ್ನ ದಾಟಿದ್ದು (ಬಿರುಗಾಳಿಶಾಂತವಾದದ್ದು). (4:35-41).
3. ಗೆರೆಸೇನೆಯಲ್ಲಿ ದೆವ್ವ ಹಿಡಿದವನನ್ನು ಸ್ವಸ್ಥಪಡಿಸಿದ್ದು (2000 ಸತ್ತ ಹಂದಿಗಳ ಘಟನೆ) (5:1-20).
4. ಪುನ ಸಮುದ್ರವನ್ನು ದಾಟಿ, ಯಾಯಿರನ ಮಗಳನ್ನು ಸ್ವಸ್ಥಮಾಡಿದ್ದು (5:21-43).
5. ನಜರೇತಿಗೆ ಹೋದ ನಂತರ, ತಿರಸ್ಕರಿಸಲ್ಪಟ್ಟಿದ್ದು (ಒಡಗಿ) (6:1-6).
6. ಸೇವೆಗಾಗಿ, ಹನ್ನೆರಡು ಜನರನ್ನು ಕಳುಹಿಸಿದ್ದು (ಹೆರೋದನ ಸಾಮಿಪ್ಯ ಅಪಾಯ) 6:7-32).
7. ಶಿಷ್ಯರ ಸಂಗಡ ಅರಣ್ಯಕ್ಕೆ ಹೋದದ್ದು, ಜನರು ಹಿಂಬಾಲಿಸಿದ್ದು, ಐದು ಸಾವಿರ ಜನರಿಗೆ ಊಟ ಬಡಿಸಿದ್ದು (ಗುರುತರ ಘಟನೆ) (6:33-44).
8. ಸಮುದ್ರವು ಯೇಸು ಅದರ ದಡದಲ್ಲಿ ನಡಿಯುವಂತೆ ಸೇವೆಸಲ್ಲಿಸಿತ್ತು

(6:45-52) - ಗೆನೆಜರೇತ್ ಬಳಿ ಪ್ರಸಂಗ, ಮತ್ತು ಸ್ವಸ್ಥತೆ ಮಾಡುವದು ಹಿಂಬಾಲಿಸಿದವು (6:53-56).

9. ಕೈ ತೊಳೆಯದ ತಿನ್ನುವ ವಿಷಯದ ಟೀಕೆ, ಸಂಪ್ರದಾಯದ ಕುರಿತ ಬೋಧನೆ (7:1-23).
10. ತೈರ್ ಮತ್ತು ಸೀದೋನಿಗೆ ಹೋದದ್ದು - ಪೊಯಿನಿಕೆಯವನ ಮಗಳನ್ನು ಗುಣಪಡಿಸಿದ್ದು (7:24-30).
11. ದೆಕಪೋಲಿಗೆ ಹೋದದ್ದು:
    a. ಸಾಮಾನ್ಯ ಬೋಧನೆ ಹಾಗೂ ಸ್ವಸ್ಥತೆ (7:31-37).
    b. ನಾಲ್ಕು ಸಾವಿರ ಪುರುಷರಿಗೆ ಆಹಾರವನ್ನು ಹಂಚಿದ್ದು (8:1-9).
12. ಗಲಿಲಾಯಕ್ಕೆ ಹಿಂದರುಗಿದ್ದು (ಗಲಿಲಾಯ ಸೀಮೆಯ ಸಮುದ್ರದ ದಲ್‌ಮಾನುತದಲ್ಲಿ) ಸೂಚಕಕಾರ್ಯದ ಮನವಿ - ಫರಿಸಾರ ಹುಳಿಯ ಕುರಿತು (8:10-21).
13. ಬೆಥಸ್ಥಕ್ಕೆ ಹೋದದ್ದು - ಕುರುಡನ ಸ್ವಸ್ಥತೆ (8:22-26).
14. ಕೈಸರೆಯ ಫಿಲಿಪ್ಪಿಗೆ ಹೊದದ್ದು - ಮಹಾ ಅರಿಕೆ (8:27-30).

III. ಸೇವಕನ ಮಹಾ ಸೇವೆ: ಶಿಲುಬೆಯ ಮರಣ (8:31-15:47).

A. ಆತನ ಸೇವೆಯ ಅಂತ್ಯ (8:31- 10:52).

1. ತನ್ನ ಮರಣಕ್ಕಾಗಿ ಶಿಷ್ಯರನ್ನು ಸಿದ್ಧಪಡಿಸಿದ್ದು.
    a. ಆತನು ಸಾಯುವದಕ್ಕಿದ್ದು, ಆತನ ಶಿಷ್ಯರು ಸಹ ಶಿಲುಬೆಯನ್ನು ಹೊರಲು ಸಿದ್ಧರಾಗಬೇಕು (8:31-9:1). (ನೋಡಿ 9:1).
    b. ಪರ್ವತದಲ್ಲಿ ಆತನ ಮಹಿಮೆಯ ಪ್ರಕಾಶ; ಪುನರುತ್ಥಾದ ಪ್ರವಾದನೆ (9:2-13).
    c. ಶಿಷ್ಯರು ಗುಣಪಡಿಸಲಾಗದ ಬಾಲಕನನ್ನು ಯೇಸು ಗುಣಪಡಿಸಿದ್ದು (9:14-29).
    d. ಆತನ ಮರಣದ ಕುರಿತ ಹೆಚ್ಚಿನ ಬೋಧನೆ (9:30-32).
    e. ಶಿಷ್ಯರಲ್ಲಿ ಅಪಾರ್ಥ; ಯಾರು ಹೆಚ್ಚಿನವರೆಂಬ ತರ್ಕ (9:33-50).
2. ಯೆರೂಸಲೇಮಿನ ಪ್ರಯಾಣದ ಆರಂಭ.
    a. ಯುದಾಯ ಹಾಗೂ ಯೋರ್ದಾನಿನ ಆಚೆ (ಪೆರಿಯ) (10:1).
        (1) ಮದುವೆ ಹಾಗೂ ವಿಚ್ಛೇದನದ ಕುರಿತ ಯೇಸುವಿನ ಸವಾಲು (10:2-12).
        (2) ಮಕ್ಕಳನ್ನು ಆಶೀರ್ವದಿಸಿದ್ದು (10:13-16).
        (3) ಶ್ರೀಮಂತನಾದ, ಯೌವನಸ್ಥನಾದವನ ಕಥೆ, ತ್ಯಜಿಸಿದರ ಫಲ (10:17-31).
    b. ಯೆರೂಸಲೇಮಿನ ಹಾದಿಯಲ್ಲಿ.
        (1) ಮುಂದೆನದನ್ನು ಶಿಷ್ಯರಿಗೆ ವಿವರಿಸಿದನು (10:32-34), ಇಬ್ಬರು ಇದನ್ನು ಅಪಾರ್ಥಮಾಡಿಕೊಂಡು, ಆತನ ಎಡ ಬಲದಲ್ಲಿ ಕೂತುಕೊಳ್ಳ ಬೇಕೆಂದು ಮನವಿಮಾಡಿದ್ದು (10:35-45).
        (2) ಯೆರಿಕೋವನ್ನು ಹಾದುಹೋದದ್ದು, ಕುರುಡ ಬಾರ್ತಿಮಾಯನ ಸ್ವಸ್ಥತೆ (10:46-52).

B. ಸಂಧಿಗ್ಧ ಪರಿಸ್ಥಿತಿ. ಸೇವೆಯ ಕಡೇಯ ವಾರ (11:14:42).

1. ಭಾನುವಾರ: ವಿಜಯದ ಪ್ರವೇಶ (11:1-11).

2. ಸೋಮವಾರ: ಅಂಜೂರ ಮರವನ್ನು ಶಪಿಸಿದ್ದು, ದೇವಾಲಯದ ಸ್ವಚ್ಛತೆ (11:12-19).
3. ಮಂಗಳವಾರ: ಚಟುವಟಿಕೆಯ ದಿನ.
   a. ಒಣಗಿಹೋದ ಅಂಜೂರ ಮರ (11:20-26).
   b. ಪ್ರಶ್ನೆಗಳ ದಿನ.
      (1) ಯಾವ ಅಧಿಕಾರ ಎಂಬ ಪ್ರಶ್ನೆ? (11:27-33).
      (2) ಕೆಟ್ಟ ಮನೆ ವಾರ್ತೆಯನ ಸಾಮ್ಯ (12:1-12).
      (3) ಕೈಸರನಿಗೆ ನೀಡಬೇಕಾದ ಕಷ್ಟದ ವಿಚಾರ (12:13-17).
      (4) ಪುನರುತ್ಥಾನ ಕುರಿತ ಪ್ರಶ್ನೆ (12:18-17).
      (5) ಮೊದಲ ಅಪ್ಪಣೆ ಕುರಿತ ಪ್ರಶ್ನೆ. ಒಬ್ಬನು ದೇವ ರಾಜ್ಯದಿಂದ ದೂರವಿರುವದಿಲ್ಲ (12:28-34).
      (6) ಯೇಸುವಿನ ಉತ್ತರದಿಂದ ವಿರೋಧಿಗಳು ಮೌನವಾದದ್ದು (12:35-37).
   c. ಸದ್ದುಕಾಯರ ಕುರಿತು ಎಚ್ಚರಿಕೆ (12:38-40).
   d. ಬಡ ವಿಧವೆಯ ದುಗ್ಗಾಣಿ (12:41-44).
   e. ದೇವಾಯವನ್ನು ಬಿಟ್ಟದ್ದು - ವಿಶೇಷ ಸಂದೇಶ (13:1-37).
4. ಬುಧವಾರ: ಯೇಸುವಿನ ಮೌನದಿನ.
   a. ವೈರಿಗಳ ಚಟುವಟಿಕೆಯ ದಿನ (14:1, 2) ಯೇಸುವಿನ ಮೌನದಿನ.
   b. ಬೆಥಾನ್ಯದ ಭೋಜನ ಹಾಗೂ ಅಭಿಷೇಕ (14:3-9).
   c. ಯೇಸುವನ್ನು ಕೊಲ್ಲುವ ಯೂದನ ಯೋಜನೆ (14:10, 11).
5. ಗುರುವಾರ: ಸೌರಣೆಯ ದಿನ.
   a. ಪಸ್ಕದ ಸೌರಣೆ (14:12-16).
   b. ಪಸ್ಕದ ಔತಣ ಹಾಗೂ ಕರ್ತನ ಭೋಜನ (14:17-26).
   c. ಎಲ್ಲರೂ ಆತನನ್ನು ಬಿಟ್ಟು ಹೋಗುವರು, ಹಾಗೂ ಪೇತ್ರನ ಹಿಂಜರಿಯುವಿಕೆ ವಿಚಾರವನ್ನ ಮುಂತಿಳಿಸಿದ್ದು (14:27-31).
   d. ಗೆತ್ಸೆಮನೆ ತೋಟ (14:32-42).

C. ಆತನನ್ನು ಶಿಲುಬೆಗೆ ಹಾಕಿದ್ದು ಮತ್ತು ಹೂಣಿಡುವಿಕೆ (14:43-52).
      (1) ಶಿಷ್ಯರು ಆತನನ್ನು ಬಿಟ್ಟು ಹೋದದ್ದು (14:43-52).
      (2) ಕಾಯಫನ ಮುಂದೆ ವಿಚಾರಣೆ: ಪೇತ್ರನು ಚಳಿ ಕಾಯಿಸಿಕೊಂಡದ್ದು (14:53-65).
      (3) ಪೇತ್ರನು ಅರಿಯನು ಎಂದದ್ದು (14:66-72).
      (4) ಹಿರೀ ಸಭೆಯವರು ವಿಚಾರಣೆಗಾಗಿ ಪಿಲಾತನ ಮುಂದೆ ಹಾಜರುಪಡಿಸಿದ್ದು. ಬರಬ್ಬನನ್ನು ಬಿಡಿಸಿದ್ದು, ಯೇಸುವನ್ನು ಅವಮಾನಪಡಿಸಿದ್ದು (15:1-20).
      (5) ನನಗಾಗಿ ಉಂಟಾದ ಯೇಸುವಿನ ಮರಣ.
      (6) ಯೇಸುವಿನ ಹೂಣಿಡುವಿಕೆ (15:42-47).

IV. ಪುನರುತ್ಥಾನದ ಮೂಲಕ ಸೇವಕನಿಗೆ ಮಹಿಮೆ ಉಂಟಾದದ್ದು (16:1-20).

A. ಸ್ತ್ರೀಯರು ಸಾಮಾಧಿಗೆ ಹೋದದ್ದು ಮತ್ತು ದೇವದೂತರು ಪ್ರಕಟಿಸಿದ್ದು (16:1-8).

B. ಪುನರುತ್ಥಾನಗೊಂಡು ಕಾಣಿಸಿಕೊಂಡ ಕೆಲವು ವಿಧಗಳು.

1. ಮಗ್ದಲದ ಮರಿಯಳಿಗೆ (16:9-11).
2. ಇಬ್ಬರು ಶಿಷ್ಯರಿಗೆ (16:12, 13).
3. ಹನ್ನೊಂದು ಜನರಿಗೆ (16:14-18). (ಶಿಷ್ಯರಿಗೆ ಅಗತ್ಯವಿದ್ದ ನಂಬಿಕೆ, ಮಹಾ ಸೇವೆಯ ಆದೇಶ 16:15, 16.)

C. ಯೇಸು ಪರಲೋಕಕ್ಕೆ ಏರಿಹೋದದ್ದು, ನಂತರದಲ್ಲಿ ಶಿಷ್ಯರ ಸೇವೆ ಮತ್ತು ಪುನರುತ್ಥಾನದ ದೃಢಗೊಂಡಿದ್ದು (16:19, 20).

---

ಟಿಪ್ಪಣಿಗಳು

[1]Eusebius *Ecclesiastical History* 3.39; 2.15; 6.25. "ಸಭೆ ಮತಾಮಹಮರು" ಎನ್ನುವವರಲ್ಲಿ ಪೆಪಿಯಸ್ ಒಬ್ಬನು. ಅಪೊಸ್ತಲರ ಕಾಲಕ್ಕೆ ಸಂಬಂಧಿಸಿ ಆತನ ರಚನೆಗಳು ಮುಖ್ಯವಾದ ಅಂತರ ದೃಷ್ಟಿಯನ್ನು ವಾಕ್ ಸಂಪ್ರದಾಯವನ್ನು ಕಲ್ಪನಾ ಕಥೆಗಳನ್ನು ಒಳಗೊಂಡಿವೆ. ನಂತರದ ಚರಿತ್ರಕಾರರಾದ ಇಸೂಬಿಯಸ್ ಮತ್ತು ಐರೆನಿಯಸ್ ಮಾತ್ರವೇ ಭಾಗ ಭಾಗವಾಗಿ ಆತನ ರಚನೆಗಳು ಕಾಣಿಸುತ್ತವೆ. ಸಭೆಯ ಅಭಿವೃದ್ಧಿಯನ್ನು ವರ್ಣಿಸಿದ್ದ ಮೊದಲ ಚರಿತ್ರಾಕಾರನು ಇಸೂಬಿಯಸ್ ಆಗಿದ್ದಾನೆ. ಅಲೆಗ್ಜಾಂಡ್ರಿಯಾದ ಕ್ಲೆಮೆಂಟು, ಗ್ರೀಕ್ ವೇದಾಂತ ಶಾಸ್ತ್ರ ಪಂಡಿತನು ಸಭೆ ಹಿರಿಯರಲ್ಲಿ ಒಬ್ಬನು ಎಂದು ಅನ್ನುತ್ತಾರೆ. [2]Irenaeus *Against Heresies* 3.1.1. ದುರ್ನದಲ್ಲಿ "ಅಧ್ಯಕ್ಷರನಾಗಿ" ಇದ್ದ (ಬಿಶೊಪ್) ಪಾಲಿಕಾರ್ಪುನ ವಿದ್ಯಾರ್ಥಿ ಈ ಐರೇನಿಯಸ್ ಎರಡನೇ ಶತಮಾನದಲ್ಲಿ ಬಹು ಪ್ರಮುಖವಾದ ತತ್ವಶಾಸ್ತ್ರಜ್ಞ ಈ ಐರೇನಿಯಸ್ ಎಂದು ಹೇಳುತ್ತಾರೆ. [3]ಆತನ ಮನೆಯ ಕರ್ತನ ರಾತ್ರಿ ಭೋಜನಕ್ಕೆ (ಮಾರ್ಕ 14:12-17) ಮತ್ತು/ಅಥವಾ ಕರ್ತನು ವಾಗ್ದಾನ ಮಾಡಿದ ಪರಿಶುದ್ಧಾತ್ಮನಿಗಾಗಿ ಕಾದುಕೊಂಡಿದ್ದು ಅದೇ ಸ್ಥಳವಾಗಿರಬಹುದು (ಅಪೊಸ್ತಲರ ಕೃತ್ಯಗಳು 1:4-8, 12). [4]ಮಾರ್ಕ 14:51, 52 ಮಾರ್ಕ ಅನ್ನುವ ಬದಲಿ ಹೆಸರುಳ್ಳ ಯೋಹಾನನನ್ನು ಸೂಚಿಸುವುದಾದರೆ ಅಪೊಸ್ತಲರಿಗಿಂತ ಕಿರಿಯನು ಎಂಬ ಸಂಗತಿ ತಿಳಿಯುತ್ತದೆ. [5]Eusebius *Ecclesiastical History* 2.16. [6]Ibid., 3.39. [7]Irenaeus *Against Heresies* 3.1.1. [8]ಈ ಸಂಚಿಕೆಯ "ನಾಲ್ಕು ಸುವಾರ್ತೆ ರಚನೆಗಳು" ಪಾಠವನ್ನು ನೋಡಲಿ. [9]Merrill C. Tenney, *New Testament Survey* (Grand Rapids, Mich.: Wm. B. Eerdmans Publishing Co., 1961), 157. [10]ಮತ್ತಾಯ 28:18-20ನ್ನು ಮಾರ್ಕ 16:15, 16ರೊಂದಿಗೆ ಹೋಲಿಸಿ.

[11]ಮೊದಲಿನಲ್ಲಿ ಸೇವಕನಾಗಿ ಇರುವುಗರಲ್ಲಿ ತಪ್ಪಿಹೋದ ಮಾರ್ಕನೇ, ಕರ್ತನಾದ ಯೇಸುವನ್ನು ಪರಿಪೂರ್ಣವಾದ ಸೇವಕನನ್ನಾಗಿ ಚಿತ್ರಿಸಿದ್ದು ಗಮನರ್ಹವಾದದ್ದು. [12]ಪೇತ್ರನ ಮರಣದ ನಂತರ ಮಾರ್ಕನ ಸುವಾರ್ತೆ ಬರೆದಿರಬಹುದು. [13]Tenney, 157. [14]John Phillips, *Exploring the Scriptures* (London: Victory Press, 1965), 200. [15]Henrietta C. Mears, *What the Bible Is All About* (Glendale, Calif.: Gospel Light Publications, 1966), 390. [16]Tenney, 159-60. [17]8ರ ನಂತರದ 12 ವಚನಗಳ ನಿಜತ್ವದ ಬಗ್ಗೆ ಕೆಲವರು ಪ್ರಶ್ನಿಸಿದ್ದಾರೆ, ಈ ವಚನಗಳು ಹಲವಾರು ಮುಖ್ಯವಾದ ಪ್ರತಿಗಳಲ್ಲಿ ಕಾಣಿಸಲಿಲ್ಲ. ಸಂಪ್ರದಾಯಕ ಬರಹಗಾರರು ಈ ವಚನಗಳು ಇಲ್ಲಿಗೆ ಸಂಬಂಧಪಟ್ಟಿವೆ ಎಂದು ನಂಬುತ್ತಾರೆ - ಮೂಲ ವಾಕ್ಯಗಳ ಭಾಗವಾಗಿ, ಮಾರ್ಕನು ಆಮೇಲೆ ಒಂದು ಸೂಚನೆಯನ್ನು ಸೇರಿಸಿದನು, ಅಥವಾ ದೈವಪ್ರೇರೆಪಿತ ಸೂಚನೆಯನ್ನು ಮತ್ತೊಬ್ಬ ದೈವಪ್ರೇರೇಪಿತ ಬರಹಗಾರರಿಂದ ಸೇರಿಸಲಾಗಿದೆ. ಉದಾಹರಣೆಗಾಗಿ, ಧರ್ಮೋಪದೇಶಕಾಂಡ 34ನ್ನು ನೋಡಿ, ಇಲ್ಲಿ ಮತ್ತೊಬ್ಬ ಬರಹಗಾರರನು, ಬಹುಶಃ ಯೆಹೋಶುವನು, ಮೋಶೆಯ ಮರಣದ ಬಗ್ಗೆ ಮೋಶೆಯ ಬರದ ಪುಸ್ತಕಕ್ಕೆ ಸೇರಿಸಿರಬಹುದು.